ಇವುಗಳಲ್ಲದೆ. ರಸ್ತೆ ಕಾಮಗಾರಿ. ಮಾಡಲು. ರಸ್ತೆ ಉಬ್ಬುಗಳನ್ನು ಹಾಕುವ ಬಗ್ಗೆ. ಹಾಗೂ ಎಚ್ಚರಿಕಾ ಫಲಕಗಳನ್ನು ಹಾಕಲು ಮಂಗಳೂರು ನಗರ ಪುರಸಭೇಯನ್ನು ಕೇಳಿಕೊಳ್ಳಲಾಗಿದೆ. ಸ್ಪೀಡ್ ಗವರ್ನರ್‌ಗಳನ್ನು ವಾಹನಗಳಿಗೆ ಅಳವಡಿಸುವ ವಿಚಾರ ಪರಿಶೀಲನೆಯಲ್ಲಿದೆ.

4. ಪುತ್ತೂರು ತಾಲ್ಲೂಕು "ಕಡಬ" ವಿದ್ಯುತ್ ಸಬ್‌ಸ್ಟೇಷನ್ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಅಧ್ಯಕ್ಷರೇ. ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿ "ಕಡಬ" ವಿದ್ಯುತ್ ಸಬ್ ಸ್ಟೇಷನ್ ಮಂಜೂರಾಗಿ ಎಷ್ಟು ವರ್ಷ ಸಂದಿದೆ? ಸದ್ರಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ? ಸದ್ರಿ ಕಾಮಗಾರಿಯನ್ನು ಮಂಜೂರು ಮಾಡಿ ಇಷ್ಟು ವರ್ಷಗಳಾದರೂ ಕೆಲಸ ಕೈಕೊಳ್ಳದಿರಲು ಕಾರಣವೇನು? ಈ ಕಡಬ ಸಬ್ ಸ್ಟೇಷನ್‌ನಿಂದ ಶ್ರೀ ಕುಕ್ಕೆಸುಬ್ರಹ್ಮಣ್ಯ ಪುಣ್ಯಕ್ಷೇತ್ರಕ್ಕೂ. ವಿದ್ಯುತ್ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಆದುದರಿಂದ ಈ ಕಾಮಗಾರಿಯನ್ನು ಯಾವಾಗ ಕೈಗೊಂಡು ಪ್ರಾರಂಭಿಸಲಾಗುವುದು. ಮತ್ತು ಕಾಮಗಾರಿಯನ್ನು ಪೂರೈಸಲು ಸರಕಾರ ಈಗಲಾದರೂ ಏನು ಕ್ರಮ ಕೈಗೊಳ್ಳುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ. ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ಈಗ ವಿದ್ಯುಚ್ಛಕ್ತಿಯನ್ನು ಸೂಳ್ಯದಿಂದ 11 ಕೆ.ವಿ. ಲೈನಿನ ಮೂಲಕ ಸರಬರಾಜು ಮಾಡಲಾಗುತ್ತಿದೆ. ಕಡಬದಲ್ಲಿ 33 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸಲು ಯೋಜಿಸಿದ್ದು. ಇದರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕೆಲಸವು ಐದಾರು ತಿಂಗಳುಗಳಲ್ಲಿ ಮುಗಿಯುವ ನಿರೀಕ್ಷೆಯಿದೆ. ಈ ವಿದ್ಯುತ್ ಉಪ ಕೇಂದ್ರವು ಮುಗಿದ ನಂತರ. ಕಡಬ ವಿದ್ಯುತ್ ಉಪ ಕೇಂದ್ರದಿಂದ ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದು. ಈ ಸಬ್ ಸ್ಟೇಷನ್ ಮಂಜೂರಾಗಿ ಸುಮಾರು ಎರಡೂವರೆ ವರ್ಷಗಳಾಗಿರುತ್ತದೆ. ಈ ಸಬ್‌ಸ್ಟೇಷನ್ ಅನ್ನು ಒಂದೂವರೆ ವರ್ಷದಲ್ಲಿ ಮಾಡಿಸಿಕೊಡುತ್ತೇನೆ.

5. ಮೂಡಬಿದ್ರೆಯಲ್ಲಿ ಏತನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ತಿಗೊಳಿಸುವ ಬಗ್ಗೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ನನ್ನ ಮೂಡುಬಿದ್ರೆ ಕ್ಷೇತ್ರದ ಏತ ನೀರಾವರಿ ಯೋಜನೆಯಂತ ಬಳಕುಂಜೆ. ಏಳಿಂಜೆ ಮತ್ತು ಮೂಡಬಿದ್ರಿಯ ಮಾರೂರು ಗ್ರಾಮಗಳಲ್ಲಿ ಮಂಜೂರಾತಿ ಒದಗಿದ್ದರು ಮೂಡಬಿದ್ರಿಯ ಫಿರ್ಕಾದ ಮಾರೂರು ಗ್ರಾಮದ ಸರ್ವೆ ಕಾರ್ಯವನ್ನು ಪೂರ್ತಿಗೊಳಿಸದೆ ಇಲ್ಲಿಗೆ ಈತನಕ ಸಂಬಂಧಿತ ಅಧಿಕಾರಿಗಳು ಬಾರದೆ ಕೆಲಸ ಬಹಳ ನಿಧಾನವಾಗಿರುತ್ತದೆ. ಹೀಗಾಗಿ ಈ ಕೆಲಸಗಳನ್ನು ಕೂಡಲೇ ತ್ವರಿತಗತಿಯಲ್ಲಿ ಮಾಡುವಂತೆ ನಾನು ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ. ಮಾತ್ರವಲ್ಲದೇ ಈ ಕಾಮಗಾರಿಗಳ ಪ್ರಗತಿಯ ವಿವರ ತಿಳಿಯಲು ಬಯಸುತ್ತೇನೆ. ಈ ಕೆಲಸಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ. ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಏತ ನೀರಾವರಿ ನಿಗಮಗಳಿಂದ ಕೈಗೊಳ್ಳುವ ಏತ ನೀರಾವರಿ ಯೋಜನೆಗಳಿಗೆ ಯೋಜನಾ ವೆಚ್ಚದ ಶೇಕಡಾ 75ರಷ್ಟು ಹಣವನ್ನು ಆರ್ಥಿಕ ಸಂಸ್ಥೆಗಳಿಂದ ಸಾಲವಾಗಿ ಪಡೆಯಬೇಕಾಗಿದೆ. ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ಮಾಡಬಿದ್ರಿ ಕ್ಷೇತ್ರದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಏತ

ನೀರಾವರಿ ಯೋಜನೆಗಳಾದ ಭೈಕುಂಜೆ ಏತ ನೀರಾವರಿ ಯೋಜನೆಯ ಅಪ್ರೈಸಲ್ ವರದಿಯು ತಯಾರಾಗಿದ್ದು ಆರ್ಥಿಕ ನೆರವಿಗಾಗಿ ಏರಿಯಾ ಬ್ಯಾಂಕ್ ಮೂಲಕ ನಬಾರ್ಡ್‌ಗೆ ಶೀಘ್ರದಲ್ಲಿಯೇ ಸಲ್ಲಿಸಲಾಗುವುದು ಹಾಗೂ ಎಳ್ಕಂಜೆ ಮತ್ತು ಮಾರಾರು (ಜಂಗರಗುಂಡಿ) ಏತ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದ ಸರ್ವೆ ಕಾರ್ಯಗಳು ಪೂರ್ತಿಯಾಗಿದ್ದು ಅಂದಾಜು ಮತ್ತು ನಕ್ಷೆಗಳು ಅಂತಿಮಗೊಳ್ಳುವ ಹಂತದಲ್ಲಿದೆ. ಅಂದಾಜುಗಳು ತಯಾರಾದ ಕೂಡಲೇ ಬ್ಯಾಂಕ್‌ಗಳ ಮೂಲಕ ನಬಾರ್ಡ್‌ಗೆ ಆರ್ಥಿಕ ನೆರವು ಪಡೆಯಲು ಕಳುಹಿಸಲಾಗುವುದು. ಈ ಯೋಜನೆಗಳ ಸರ್ವೆಕಾರ್ಯದಲ್ಲಿ ನಿಧಾನವಾಗಿರುವುದಿಲ್ಲ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ :

ಕ್ರ.ಸಂ.	ಯೋಜನೆಯ ಹೆಸರು	ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)	ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)
1.	ಎಳ್ಕಂಜೆ. ಮಂಗಳೂರು ತಾಲ್ಲೂಕು	18.60	81
2.	ಬಳಕುಂಜೆ. ಮಂಗಳೂರು ತಾಲ್ಲೂಕು	26.57	142
3.	ಮೂರು (ಜಂಗರಗುಂಡಿ) ಕಾರ್ಕಳ ತಾಲ್ಲೂಕು	24.00	91

ಈ ಯೋಜನೆಗಳಿಗೆ ಆರ್ಥಿಕ ನೆರವು 1992-93ರಲ್ಲಿ ದೊರೆತಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಯೋಜನೆಗಳನ್ನು ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಹಾಸನ ಕ್ಷೇತ್ರದಲ್ಲಿ ನೀರಾವರಿ ಕಾಮಗಾರಿ ಕೆಲಸಗಳ ಬಗ್ಗೆ ಅಧಿಕಾರಿಗಳು ಅಸಡ್ಡೆ ತೋರುತ್ತಿರುವುದು.

† ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ, ಹಾಸನ ಕ್ಷೇತ್ರದಲ್ಲಿ ಗೊರೂರು ಡ್ಯಾಂ ಕಟ್ಟಿರುವುದರಿಂದ ಸುಮಾರು 3-4 ಸಾವಿರ ಎಕರೆ ಫಲವತ್ತಾದ ಜಮೀನು ಮುಳುಗಡೆಯಾಗಿದೆ. ಕಾಫಿ ತೋಟ, ಗದ್ದೆ, ಹೊಲ ಎಲ್ಲ ಮುಳುಗಡೆಯಾಗಿದೆ. ಆದರೂ ಹಾಸನ ಕ್ಷೇತ್ರಕ್ಕೆ ಹೇಮಾವತಿ ಪ್ರಾಜೆಕ್ಟ್‌ನಿಂದ ಯಾವ ನೀರಾವರಿ ಸೌಕರ್ಯವೂ ಇಲ್ಲ. ನಿರಂತರವಾಗಿ ಅದು ಕ್ಷಾಮದ ದವಡೆಗೆ ಸಿಕ್ಕಿರತಕ್ಕ ಪ್ರದೇಶ. ಸರ್ಕಾರದ ಹಣದಿಂದ ಹೊಳೇನರಸೀಪುರದ ಕೆಂಪುಸಮುದ್ರದ ಹತ್ತಿರದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ಸ್ ಆಗಿ ಕಾರ್ಯಗತವಾಗುತ್ತಿದೆ. ಹಾಸನ ತಾಲ್ಲೂಕಿನಲ್ಲಿ ಕಾಂಟೂರು ಬಂಡ್ ಕೆಲಸ ಇದ್ದರೂ ಅಲ್ಲಿ ಮಾಡತಕ್ಕ ಕೆಲಸವನ್ನು ತಕ್ಷಣ ನಿಲ್ಲಿಸಿ ಹಾಸನದಿಂದ ಪುನಃ ಹೊಳೇನರಸೀಪುರಕ್ಕೆ ಹೋಗಿದ್ದಾರೆ. ಏಕೆಂದರೆ ಹೊಳೇನರಸೀಪುರ ಸಣ್ಣ ಸಂಸ್ಥಾನ ಇದ್ದ ಹಾಗೆ. ಅಲ್ಲಿ ದೊಡ್ಡ ನವಾಬ ಇರುವ ಹಾಗೆ. ದುಡ್ಡೆಲ್ಲ ಅವರದ್ದೇ ಇರುವ ಹಾಗೆ ಆ ರೀತಿ ವ್ಯವಸ್ಥೆ ನಡೆದಿದೆ ; ಚೋಟಾ ನವಾಬರದ್ದು. ಆಗ ನಾನು ಶಾಸನಸಭೆಯಲ್ಲಿ ಪ್ರಸ್ತಾಪ ಮಾಡಿ ಹಾಸನ ತಾಲ್ಲೂಕ್ ಪಾಕೀಸ್ತಾನಕ್ಕೆ. ಚೈನಾಕ್ಕೆ ಸೇರಿಲ್ಲ. ಬಡಜನರು ಕೊಟ್ಟಿರತಕ್ಕ ದುಡ್ಡಿನಲ್ಲಿ ಕಟ್ಟಿರತಕ್ಕ ಪ್ರಾಜೆಕ್ಟ್ ....

ಚೇರ್ಮನ್ : ಸಂಕ್ಷಿಪ್ತವಾಗಿ ಹೇಳಿ. ಇಲಾಖೆ ಬೇಡಿಕೆ ಬರುತ್ತಿದೆ-ಆಗ ವಿವರವಾಗಿ ಮಾತನಾಡುವಿರಂತೆ.